## ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ : ಕಲಬುರಗಿ ವಿಭಾಗ-1; ಕಲಬುರಗಿ

ಸಂ/ಕಕರಸಾನಿ/ಕವಿ-1/ಸಂ ವಾ/ 439 /2022.23 ದಿ.24 .05.2022

**ಟೆಂಡರ್(ಕೊಟೇಷನ್) ಪ್ರಕಟಣೆ ಸಂಖ್ಯೆ: (ಸ್ವಚ್ಚತಾ ಗುತ್ತಿಗೆ) 02 /2021-22**

**(ಇ-ಪ್ರೊಕ್ಯೂರ್‌ಮೆಂಟ್ ಮೂಲಕ)**

**(ಸಾಮಾನ್ಯ ಸ್ಥಾಯೀ ಆದೇಶ 493/01 ಮತ್ತು ಸಾಮಾನ್ಯ ಸ್ಥಾಯೀ ಆದೇಶ 52/2010 ಮತ್ತು ಸಾಮಾನ್ಯ ಸ್ಥಾಯೀ ಆದೇಶ 141/2016 ಮತ್ತು ಸಾಮಾನ್ಯ ಸ್ಥಾಯಿ ಅದೇಶ ಸಂ.169/2020.21 ದಿ.14.12.2020 ರನ್ವಯ)**

-★★★★★-

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ : ಕಲಬುರಗಿ ವಿಭಾಗ-1 ಕಲಬುರಗಿ ವ್ಯಾಪ್ತಿಯಲ್ಲಿ ಬರುವ ಬಸ್ ನಿಲ್ದಾಣದಲ್ಲಿನ ಶೌಚಾಲಯ/ಮೂತ್ರಾಲಯ ಬಯಲು ಮೂತ್ರಾಲಯ ಮತ್ತು ಆವರಣದ ಸ್ವಚ್ಛತೆಗಾಗಿ **"ಕಾರ್ಮಿಕ ಇಲಾಖೆಯಿಂದ ಈಗಾಗಲೇ ಗುತ್ತಿಗೆ ನೋಂದಣಿ ಮಾಡಿಕೊಂಡಿರುವ"** ಏಕ ವ್ಯಕ್ತಿ / ಏಜೆನ್ಸಿರವರಿಂದ ಹಣ ತೆತ್ತು ಉಪಯೋಗಿಸುವ ಪದ್ಧತಿಯಲ್ಲಿ ನಿರ್ವಹಣೆ ಮಾಡಲು 03 **(ಮೂರು ವರ್ಷಗಳ ಅವಧಿಗೆ)** ಸ್ವಚ್ಚತೆ ಗುತ್ತಿಗೆದಾರರನ್ನು ಆಯ್ಕೆ ಮಾಡಲು ಇ-ಟೆಂಡರ್(ಇ-ಕೊಟೇಷನ್) ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಇ.ಎಂ.ಡಿ.ಮೊತ್ತವನ್ನು ಅರ್ಜಿ ಶುಲ್ಕದ ಮೊತ್ತವನ್ನು ಇ-ಪೋರ್ಟಲ್‌ನಲ್ಲಿ ಸಲ್ಲಿಸುವುದು.

**ಭಾಗವಹಿಸಲು ಇಚ್ಚಿಸುವ ಏಕ ವ್ಯಕ್ತಿ/ ಏಜೆನ್ಸಿ ರವರಿಗೆ ವಿಶೇಷ ಸೂಚನೆ :**

- **ವಿಶೇಷ ಸೂಚನೆ : -** ಆನ್ ಲೈನ್ ನಮೂನೆಯಲ್ಲಿ ಕಲಬುರಗಿ ವಿಭಾಗ-1 ರ ಈ ಕೆಳಕಂಡ ಬಸ್ ನಿಲ್ದಾಣಗಳ ಶೌಚಾಲಯ/ಮೂತ್ರಾಲಯ ಹಾಗೂ ಆವರಣದ ಸ್ವಚ್ಛತಾ ಗುತ್ತಿಗೆಗೆ ಹೆಚ್ಚಿನ ಮಾಸಿಕ ಶುಲ್ಕದ ಬೇಡಿಕೆ ಸಲ್ಲಿಸುವ **"ಕಾರ್ಮಿಕ ಇಲಾಖೆಯಿಂದ ಈಗಾಗಲೇ ಗುತ್ತಿಗೆ ನೋಂದಣಿ ಮಾಡಿಕೊಂಡಿರುವ"** ಏಕ ವ್ಯಕ್ತಿ /ಏಜೆನ್ಸಿರವರು ಸ್ವಚ್ಛತಾ ಗುತ್ತಿಗೆಯ ಕೊಟೇಶನ್ ಪರವಾನಿಗೆದಾರರನ್ನಾಗಿ ಆಯ್ಕೆ ಮಾಡಲಾಗುವುದು. ಬೇಡಿಕೆ ಸಲ್ಲಿಸುವ ಏಕ ವ್ಯಕ್ತಿ / ಏಜೆನ್ಸಿದಾರರನ್ನು ಪರಿಗಣಿಸುವ/ ತಿರಸ್ಕರಿಸುವ / ಪುರಸ್ಕರಿಸುವ /ರದ್ದು ಪಡಿಸುವ ಅಥವಾ ಮಾರ್ಪಾಡು ಮಾಡುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಹಾಗೆಯೇ ಬಸ್ ನಿಲ್ದಾಣಗಳಿಗೆ ಒಳಗೊಂಡಂತೆ ಅತಿ ಹೆಚ್ಚಿನ ಮಾಸಿಕ ಶುಲ್ಕ ಘೋಷಿಸಿದ ಏಕ ವ್ಯಕ್ತಿ / ಏಜೆನ್ಸಿದಾರರಿಗೆ ಪರವಾನಿಗೆದಾರರನ್ನಾಗಿ ಆಯ್ಕೆ ಮಾಡುವ ಅಧಿಕಾರವು ಸಂಸ್ಥೆಯು ಕಾಯ್ದಿರಿಸಿಕೊಂಡಿರುತ್ತದೆ. ಬಿಡ್ಡುದಾರರು ಕ.ಕ.ರ.ಸಾ ನಿಗಮ ಮತ್ತು ಇತರೆ ನಿಗಮಗಳಲ್ಲಿ **DEFAULTER** ಆಗದೆ ಇರುವ ಬಗ್ಗೆ ಹಾಗೂ ಕಪ್ಪು ಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ಸ್ವಯಂ ದೃಢೀಕರಣ ಪತ್ರ ನೀಡಬೇಕಾಗಿರುತ್ತದೆ. ಸ್ವಯಂ ದೃಢೀಕರಣವನ್ನು ಮತ್ತು ಎಲ್ಲಾ ದಾಖಲೆಗಳ ಸ್ಕ್ಯಾನ್ ಕಾಪಿಗಳನ್ನು ಇ-ಪೋರ್ಟಲ್‌ನಲ್ಲಿ ಅಪ್ ಲೋಡ್ ಮಾಡಬೇಕು.

| ಕ್ರ.ಸ | ಬಸ್ ನಿಲ್ದಾಣದ ಹೆಸರು | ಕಟ್ಟಡದ ವಿಸ್ತೀರ್ಣ ಚ.ಅ.ಗಳಲ್ಲಿ | ಆವರಣದ ವಿಸ್ತೀರ್ಣ ಚ.ಅ.ಗಳಲ್ಲಿ | ಶಾಚಾಲಯ ಗಳಸಂಖ್ಯೆ | ಮೂತ್ರಾಲಯ ಗಳ ಸಂಖ್ಯೆ | ನಿಯೋಜಸಬೇಕಾದ ಕನಿಷ್ಠ ಕಾರ್ಮಿಕರ ಸಂಖ್ಯೆ | | ಸಂಸ್ಥೆ ನಿಗದಿ ಪಡಿಸಿರುವ ಮಾಸಿಕ ಶುಲ್ಕ (ಜಿ.ಎಸ್.ಟಿ ಹೊರತು ಪಡಿಸಿ) 75% | ಇ-ಪೋರ್ಟಲ್ ಮೂಲಕ ಇ.ಎಮ್.ಡಿ ಅರ್ಜಿ ಶುಲ್ಕ ರೂ.500/- ಜಿ.ಎಸ್.ಟಿ(18%) ರೂ.100/- ಸೇರಿ ಒಟ್ಟು ರೂ.600/- ಕೇಂದ್ರ ಪ್ರದೇಶ ಅರ್ಜಿ ಶುಲ್ಕ-1000 ಜಿ.ಎಸ್.ಟಿ=100 ಇಟ್ಟು=1100 ಒಳಗೊಂಡಿರುತ್ತದೆ) | ಅವಧಿ |
|---|---|---|---|---|---|---|---|---|---|---|
| | | | | | | ಪಾಳಿ-1 | ಪಾಳಿ-2 | | | |
| 1 | ಚಿಂಚೋಳಿ | 11385 | 82269 | 10 | 06 | 02 | 02 | 18150/- | 75600/- | 03 ವರ್ಷ |
| 2 | ಚಿತ್ತಾಪುರ | 9630 | 65324 | 08 | 11 | 02 | 02 | 22688/- | 75600/- | 03 ವರ್ಷ |
| 3 | ಸೇಡಂ | 2242 | 46762 | 09 | 07 | 02 | 02 | 72600/- | 75600/- | 03 ವರ್ಷ |
| 4 | ಶಹಾಬಾದ | 3530 | 44836 | 13 | 06 | 02 | 02 | 27225/- | 75600/- | 03 ವರ್ಷ |
| 5 | ಸುಲೇಪೇಟ್ | 2325 | 27077 | 06 | 05 | 01 | 01 | 9075/- | 10600/- | 03 ವರ್ಷ |
| 6 | ಮಳಖೇಡ | 6415 | 33585 | 08 | 04 | 01 | 01 | 908/- | 10600/- | 03 ವರ್ಷ |
| 7 | ಮುಧೋಳ | ---- | ---- | ---- | ---- | 01 | 01 | 1734/- | 10600/- | 03 ವರ್ಷ |
| 8 | ಕಮಲಾಪೂರ | 3790 | 4922 | 09 | 05 | 01 | 01 | 46283/- | 75600/- | 03 ವರ್ಷ |
| ೯ | ಸುಪರ್ ಮಾರ್ಕೆ | --- | --- | 02 | 02 | 01 | 01 | 33000/- | 101100/- | 03 ವರ್ಷ |
| | ಒಟ್ಟು | | | | | | | 2,31,662/- | 5,10,900/- | |

-:ಟೆಂಡರ್ ನಿಗದಿಗೊಳಿಸಿದ ವಿವರ:-

| ಕ್ರ.ಸಂ. | ವಿವರ | ದಿನಾಂಕ | ಸಮಯ |
|---|---|---|---|
| 1 | ಇ-ಟೆಂಡರ್ ದಸ್ತಾವೇಜುಗಳನ್ನು ಡೌನ್ ಲೋಡ್ ಮಾಡಿಕೊಳ್ಳಲು ಕೊನೆಯ ದಿನಾಂಕ. | 14.06.2022 | ಸಾಯಂಕಾಲ 17.00 ಗಂಟೆಯವರೆಗೆ |
| ೨ | ಆನ್‌ಲೈನ್ ಟೆಂಡರ್ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ | 15.06.2022 | ಸಾಯಂಕಾಲ 17.00 ಗಂಟೆಯವರೆಗೆ |
| ೩ | ಇ-ಟೆಂಡರ್ ತೆರೆಯುವ ದಿನಾಂಕ | 17.06.2022 | ಬೆಳಿಗ್ಗೆ : 11.00 ರ ನಂತರ |
| ಸೂಚನೆ :1) ಎಲ್ಲ ದಾಖಲಾತಿಗಳನ್ನು ಇ-ಪ್ರೋಕ್ಯೂರಮೆಂಟ್ ನಲ್ಲಿ ಅಪ್‌ಲೋಡ ಮಾಡುವುದು ಅದನ್ನು ಟೆಂಡರ್ ತೆರೆಯುವಾಗ ಪರಿಶೀಲಿಸಿ ಡೌನಲೋಡ್ ಮಾಡಿಕೊಳ್ಳಲಾಗುವುದು. ವಿಭಾಗೀಯ ಕಚೇರಿಯಲ್ಲಿ ದಾಖಲೆಗಳನ್ನು ಸಲ್ಲಿಸುವ ಅವಶ್ಯಕತೆ ಇರುವದಿಲ್ಲ.<br>ಸೂಚನೆ :2) ಮೇಲ್ಕಾಣಿಸಿದಂತೆ ಇ.ಎಂ.ಡಿ ಹಾಗೂ ಅರ್ಜಿ ಶುಲ್ಕವನ್ನು ಇ-ಪ್ರೋಕ್ಯೂರಮೆಂಟ್ ಮೂಲಕವೇ ಪಾವತಿಸುವುದು. | | | |

## ಷರತ್ತು ಮತ್ತು ನಿಬಂಧನೆಗಳು:-

- ಗುತ್ತಿಗೆದಾರರು ಕಡ್ಡಾಯವಾಗಿ ಕಾರ್ಮಿಕ ಇಲಾಖೆಯಿಂದ ನೊಂದಾಯಿಸಿಕೊಂಡು ಲೈಸನ್ಸ್ ಹೊಂದಿರುವವರನ್ನು ಮಾತ್ರ ಆಯ್ಕೆಗೊಳಿಸಲಾಗುವುದು. ಲೈಸನ್ಸ್ ಪ್ರತಿಯನ್ನು ಇ-ಪೋರ್ಟಲ್‌ನಲ್ಲಿ ಅಪ್ ಲೋಡ್ ಮಾಡುವುದು ಕಡ್ಡಾಯವಾಗಿದೆ.
- ಇ-ಪೂರ್ಟನಲ್ಲಿ ನಿಗದಿಪಡಿಸಿರುವ ಇ.ಎಂ.ಡಿ.ಮೊತ್ತವನ್ನು ಮತ್ತು ಅರ್ಜಿ ಶುಲ್ಕದ ಮೊತ್ತ ಮೇಲಿನಂತೆ ಪ್ರತ್ಯೇಕವಾಗಿ ಇ-ಪೋರ್ಟಲ್ ಮೂಲಕವೇ ಸಲ್ಲಿಸಬೇಕು.
- ಮೇಲೆ ತಿಳಿಸಿದ ಮಾಸಿಕ ಶುಲ್ಕವು ಸರಕು ಮತ್ತು ಸೇವಾ ತೆರಿಗೆಯನ್ನು ಹೊರತುಪಡಿಸಿದ್ದಾಗಿರುತ್ತದೆ.
- ಬೇಡಿಕೆ ಸಲ್ಲಿಸುವ ಮೊತ್ತಕ್ಕೆ ಜಿ.ಎಸ್.ಟಿ.ಇತರೆ ತೆರಿಗೆಗಳನ್ನು ಪ್ರತ್ಯೇಕವಾಗಿ ಪಾವತಿಸಬೇಕಾಗುತ್ತದೆ.
- ಭದ್ರತಾ ಠೇವಣಿಯನ್ನು ನಿಗದಿತ ರೀತಿಯಲ್ಲಿ ಸಲ್ಲಿಸಲು ವಿನಂತಿಯೊಂದಿಗೆ ಯಶಸ್ವಿ ಟೆಂಡರ್ದಾರರಿಗೆ ಪತ್ರ ಮೂಲಕ ತಿಳಿಸಲಾಗುತ್ತದೆ.
- ಯಶಸ್ವಿ ಗುತ್ತಿಗೆದಾರನು ಟೆಂಡರ್‌ನಲ್ಲಿ ನಮೂದಿಸಿದ ಮೊತ್ತದನ್ವಯ ಆರು ಪಟ್ಟಿಗೆ ಸಮನವಾಗಿರುವಂತೆ ಭದ್ರತಾ ಠೇವಣಿ ಮೊತ್ತವನ್ನು ಪಾವತಿಸಬೇಕು
- ನಿಯಮಗಳು ಮತ್ತು ಷರತ್ತುಗಳ ಪ್ರಕಾರ ನಿಗಮದ ತೃಪ್ತಿಗೆ ತಕ್ಕಂತೆ ಕೆಲಸ ಮಾಡಲು ಗುತ್ತಿಗೆದಾರರು/ಬಿಡ್ಡುದಾರರು ವಿಫಲರಾದಲ್ಲಿ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.
- ವಿಳಾಸ ದೃಢಿಕರಣ (ಆದಾರ ಕಾರ್ಡ, ಓಟರ್ ಆಯ್.ಡಿ, ಬ್ಯಾಂಕ್ ಪಾಸ್ ಬುಕ್, ಪಾಸಪೋರ್ಟ)
- ಬಿಡ್‌ದಾರರು ಪಾಲುದಾರಿಕೆ ವ್ಯವಹಾರ ಸಂಸ್ಥೆಯನ್ನು ಹೊಂದಿದಲ್ಲಿ, ಭಾರತೀಯ ಪಾಲುದಾರಿಕೆ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿ, ಬಿಡ್ ಸಹಿಗೊಳಿಸುವ ವ್ಯಕ್ತಿಯ ಪಾಲುದಾರಿಕೆಯ ಸಂಸ್ಥೆಯಲ್ಲಿ ವ್ಯವಸ್ಥಾಪಕ ಪಾಲುದಾರನಾಗಿರುವ ಬಗ್ಗೆ ದಾಖಲಾತಿಯನ್ನು ಸಲ್ಲಿಸಬೇಕು, ಪಾಲಿದಾರಿಕೆಯಲ್ಲಿರುವ ಎಲ್ಲಾ ನಿರ್ದೇಶಕರು/ಪಾಲುದಾರರ ಪೂರ್ಣ ವಿಳಾಸ ಸಲ್ಲಿಸುವುದು.
- ಬಿಡ್‌ದಾರರು ಕಂಪನಿ/ವ್ಯವಹಾರ ಸಂಸ್ಥೆಯ ಹೆಸರಿನಲ್ಲಿ ಬಿಡ್‌ಮಾಡಿದಲ್ಲಿ, ಕಂಪನಿಯ ಇಂಡಿಯನ್ ಕಂಪನೀಸ್ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿಗಳನ್ನು ಸಲ್ಲಿಸಬೇಕು.
- ಬಿಡದಾರರು ಕ.ಕ.ರ.ಸಾ ನಿಗಮ ಮತ್ತು ಇತರೆ ನಿಯಮಗಳಲ್ಲಿ **DEFAULTER** ಆಗದೆ ಇರುವ ಬಗ್ಗೆ ಹಾಗೂ ಕಪ್ಪು ಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ಸ್ವಯಂ ದೃಢೀಕರಣ ಪತ್ರ. ನೀಡಬೇಕು.
- ಕೆಳಗೆ ನಮೂದಿಸಿದ ಹೆಚ್ಚುವರಿ ನೀತಿ - ನಿಬಂಧನೆಗಳಲ್ಲಿ ತಿಳಿಸಿದಂತೆ.
- ಸ್ವಚ್ಛತಾ ಗುತ್ತಿಗೆಗೆ ಆಹ್ವಾನಿಸಲಾಗುವ ಇ-ಕೋಟೇಶನ್ ಅರ್ಜಿ ಶುಲ್ಕವನ್ನು ಜಿಲ್ಲಾ ಮಟ್ಟದ ಬಸ್ ನಿಲ್ದಾಣಗಳಿಗೆ ರೂ.1,000/- ಹಾಗೂ ತಾಲ್ಲೂಕು/ಹೋಬಳಿ ಪ್ರತ್ಯೇಕ ಬಸ್ ನಿಲ್ದಾಣಗಳಿಗೆ ರೂ.500/- ಗಳನ್ನು (ಜಿ.ಎಸ್.ಟಿ.ಹೊರತುಪಡಿಸಿ) ನಿಗದಿಪಡಿಸಲಾಗಿದೆ.
- **ಈ ಕೆಳಗಿನ ಯಾವುದೇ ಇ-ಪಾವತಿ ವಿಧಾನದಲ್ಲಿ ಬಿಡ್ಡುದಾರರು ಇ-ಪೋರ್ಟಲ್‌ನಲ್ಲಿ ಸಲ್ಲಿಸಬೇಕು**

  1 ) ಕ್ರೆಡಿಟ್ ಕಾರ್ಡ ೦೨)ಡೆಬಿಟ್ ಕಾರ್ಡ ೦೩) ರಾಷ್ಟ್ರೀಯ ಎಲೆಕ್ಟಾನಿಕ್ ಫಂಡ್ ವರ್ಗಾವಣೆ

  - ಬೇಡಿಕೆದಾರರು ಟೆಂಡರ್ ಸಲ್ಲಿಸುವ ಮೊದಲು ಸಂಸ್ಥೆಯ ಎಲ್ಲ ನಿಯಮ ಹಾಗೂ ನಿಬಂಧನೆಗಳನ್ನು ಓದಿ ಅರ್ಥೈಸಿಕೊಂಡು ಈ ಕುರಿತು ವಿಭಾಗೀಯ ಕಚೇರಿಗೆ ಬಂದು ಹೆಚ್ಚಿನ ಮಾಹಿತಿ ಪಡೆದು ತಮ್ಮ ಟೆಂಡರ್‌ನ್ನು ಸಲ್ಲಿಸುವುದು. ನಂತರದಲ್ಲಿ ಯಾವುದೇ ಆಕ್ಷೇಪಣೆಗಳಿಗೆ ಅವಕಾಶ ಇರುವದಿಲ್ಲ.
  - ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರನಲ್ಲಿ ಭಾಗವಹಿಸುವ ಅರ್ಜಿದಾರರು ತಮ್ಮ ವಿಳಾಸವನ್ನು ಸರಿಯಾಗಿ ನಮೂದಿಸಬೇಕು ಮತ್ತು ವಿಳಾಸದ ದೃಢೀಕರಣ ಪತ್ರದ ನಕಲನ್ನು ಮತ್ತು ಪಾನ್ ಕಾರ್ಡ ನಕಲು ಪ್ರತಿಯನ್ನು ಸಹ ಸಲ್ಲಿಸಬೇಕು
  - ಯಾವುದೇ ನಿಬಂಧನೆಗಳನ್ನು ಉಲ್ಲಂಘಿಸಿದ ಕಾರಣ ಪ್ರಾಧಿಕಾರಕ್ಕೆ ಉಂಟಾಗುವ ಎಲ್ಲಾ ಹಾನಿ ಮತ್ತು ಅಡಚಣೆಗಳಿಗೆ ಗುತ್ತಿಗೆದಾರರ ಮಾತ್ರ ಜವಾಬ್ದಾರನಾಗಿರುತ್ತಾನೆ. ಮತ್ತು ಗುತ್ತಿಗೆದಾರರಿಂದ ಹಾನಿ ವೆಚ್ಚವನ್ನು ಪಡೆಯಲು ಪ್ರಾಧಿಕಾರಕ್ಕೆ ಅಧಿಕಾರವಿರುತ್ತದೆ.
  - ಟೆಂಡರ್ ಅರ್ಜಿ ಸಲ್ಲಿಸುವಾಗ ಸರಕು ಮತ್ತು ಸೇವಾ ತೆರಿಗೆಯ ಐ.ಡಿ. ಯನ್ನು ಹೊಂದಿರಬೇಕು.
  - ಆಯ್ಕೆಯಾದ ಪರವಾನಿಗೆದಾರರು/ಗುತ್ತಿಗೆದಾರರು ಸಂಸ್ಥೆಯ ನಿಯಮಗಳ ಉಲ್ಲಂಘನೆ ಮಾಡಿದಲ್ಲಿ, ಕರಾರು ಒಪ್ಪಂದ ಅಥವಾ ಪರವಾನಿಗೆ ರದ್ದುಪಡಿಸಿದಾಗ ಸಂಸ್ಥೆಯ ವಿರುದ್ಧ ಯಾವುದೇ ನ್ಯಾಯಾಲಯದಲ್ಲಿ ದಾವೆ, ವಗೈರೆ ಮಾಡುವುದಿಲ್ಲವೆಂದು ಮುಚ್ಚಳಿಕೆ ಬರೆದು ಕೊಡಬೇಕು.
  - ಸ್ವಚ್ಛತಾ ಗುತ್ತಿಗೆ ಸಂಬಂಧಿಸಿದಂತೆ ಯಾವುದೇ ಸೂಚನೆ ನೀಡದೇ ಷರತ್ತುಗಳನ್ನು ಬದಲಾಯಿಉಸವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿರುತ್ತದೆ.
  - ಆಖೈರು ಬಿಡ್ಡುದಾರರು/ಪರವಾನಿಗೆದಾರರು ನಿಗದಿಯಾದ ಮಾಸಿಕ ಶುಲ್ಕಕ್ಕೆ, ಸರ್ಕಾರವು ಕಾಲ ಕಾಲಕ್ಕೆ ವಿಧಿಸುವ ಜಿ.ಎಸ್.ಟಿ./ಸೇವಾ ತೆರಿಗೆ ಇತರೆ ತೆರಿಗೆಗಳನ್ನು ಸೇರಿಸಿ ಮಾಸಿಕ ಶುಲ್ಕದೊಂದಿಗೆ ಪಾವತಿಸಬೇಕು.
  - ಟೆಂಡರ್ ನಲ್ಲಿ ಭಾಗವಹಿಸಿದ ಬಿಡ್ಡುದಾರರನ್ನು ಆಯ್ಕೆ ಮಾಡುವ, ಒಪ್ಪುವ ಅಥವಾ ಬೇಡಿಕೆಯನ್ನು ತಿರಸ್ಕರಿಸುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿರುತ್ತದೆ.
  - ಸಂಸ್ಥೆಯು ಕಾಲ ಕಾಲಕ್ಕೆ ನೀಡುತ್ತಿರುವ ನಿರ್ದೇಶನ ಹಾಗೂ ಸಂಸ್ಥೆಯು ಹೊರಡಿಸಿದ / ಹೊರಡಿಸುತ್ತಿರುವ ಸುತ್ತೋಲೆಗಳ

ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗಿರುತ್ತದೆ.

- ತಾಂತ್ರಿಕ ಕಾರಣಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ದಿನಾಂಕಗಳನ್ನು ಮುಂದೂಡಿಸಿದಲ್ಲಿ ಅದಕ್ಕೆ ಇ-ಪ್ರೋಕ್ಯೂರಮೆಂಟ್ ಸೆಲ್‌ದಿಂದ ಮಾಹಿತಿ ಪಡೆಯುವುದು.
- **ಆಯ್ಕೆಯಾಗದ ಬೇಡಿಕೆದಾರರಿಗೆ ಅವರು ಪಾವತಿಸಿದ ಇ.ಎಂ.ಡಿ ಮೊತ್ತವು ಮರು ಪಾವತಿಸಲು ಕನಿಷ್ಠ 1 ತಿಂಗಳ ಅಥವಾ ಅದಕ್ಕೂ ಹೆಚ್ಚಿನ ಕಾಲಾವಕಾಶ ಬೇಕಾಗಿರುತ್ತದೆ.**
- **ಕಪ್ಪು ಪಟ್ಟಿಗೆ ಸೇರಿದ ಪರವಾನಗಿದಾರರು ಸಂಸ್ಥೆಯ ಯಾವುದೇ ಟೆಂಡರ್ / ಸಂಧಾನದಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಒಂದು ವೇಳೆ ಟೆಂಡರ್/ಸಂಧಾನದಲ್ಲಿ ಭಾಗವಹಿಸಿದಲ್ಲಿ ಅವರ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.**
- **ನ್ಯಾಯಾಲಯದಲ್ಲಿ ಸಂಸ್ಥೆಯ ವಿರುದ್ಧ ಪ್ರಕರಣ ದಾಖಲು ಮಾಡಿರುವವರು ಹಾಗೂ ಕಪ್ಪುಪಟ್ಟಿಯಲ್ಲಿ ಸೇರಿಸಲಾದ ಅಭ್ಯರ್ಥಿಗಳು ಟೆಂಡರ್‌ನಲ್ಲಿ ಭಾಗವಹಿಸುವಂತಿಲ್ಲ. ಒಂದು ವೇಳೆ ಇ-ಟೆಂಡರ್‌ನಲ್ಲಿ ಅಂತಹ ಅಭ್ಯರ್ಥಿಗಳು ಭಾಗವಹಿಸಿದ್ದಲ್ಲಿ ಅವರ ಬೇಡಿಕೆಯನ್ನು ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.**
- **ಒಂದು ವೇಳೆ ಬಿಡ್‌ದಾರರು ಇ-ಪೋರ್ಟಲ್‌ನ ಆರ್ಥಿಕ ಬಿಡ್‌ನಲ್ಲಿ ಮತ್ತು ನಿಗದಿತ ನಮೂನೆಯಲ್ಲಿ ನಮೂದಿಸಿದ ಬಿಡ್ ಮೊತ್ತ ಬೇರೆ ಬೇರೆ ಆಗಿದಲ್ಲಿ ಇ-ಪೋರ್ಟಲ್‌ನ ಆರ್ಥಿಕ ಬಿಡ್ ಮೊತ್ತವನ್ನು ಪರಿಗಣಿಸಲಾಗುವುದು.**
- **ಬಸ್ ನಿಲ್ದಾಣಗಳ ನವೀಕರಣ ಕಾಮಗಾರಿ / ಆವರಣವನ್ನು ಮೇಲ್ದರ್ಜೆಗೇರಿಸುವ / ದುರಸ್ತಿ ಕಾರ್ಯಗಳನ್ನು ಕೈಗೆತ್ತಿಕೊಳ್ಳುವ ಸಮಯದಲ್ಲಿ, ಸಂಸ್ಥೆಯು ಪರವಾನಗಿದಾರರಿಗೆ ಒಂದು ತಿಂಗಳ ಮುಂಗಡ ನೋಟಿಸ್ ಜಾರಿ ಮಾಡಿ ಪರವಾನಗಿಯನ್ನು ರದ್ದುಪಡಿಸಲಾಗುವುದು.**
- **ಬಿಡ್‌ದಾರರು ಷರತ್ತಿನ ಟೆಂಡರಗಳನ್ನು ಪರಿಗಣಿಸಲು ಅವಕಾಶವಿರುವದಿಲ್ಲ ಯಾವುದೇ ಷರತ್ತುಗಳು ಇಲ್ಲದೆ ಟೆಂಡರ್ ನಿಯಮಗಳನ್ನು ಪಾಲಿಸುವ ಅರ್ಹ ಟೆಂಡರಗಳನ್ನು ಮಾತ್ರ ಅಂಗೀಕರಿಸಲಾವುದು.**
- **ಸ್ಥಳೀಯ ಇಲಾಖೆ/ಪ್ರಾಧಿಕಾರಗಳು ವಿಧಿಸುವ ತೆರಿಗೆಯನ್ನು ಪರವಾನಿಗೆದಾರರೇ ಸಂಬಂಧಿಸಿದ ಇಲಾಖೆ/ಪ್ರಾಧಿಕಾರಗಳಿಗೆ ಸಂದಾಯ ಮಾಡುವುದು.**

**ಸೂಚನೆ**:02 ಅಯ್ಕೆಗೊಂಡ ಗುತ್ತಿಗೆದಾರರು ನಿಗದಿತ ಅವಧಿಯೊಳಗಡೆ ಕರಾರು ಒಪ್ಪಂದ ಮಾಡಿಕೊಳ್ಳಲು ವಿಫಲರಾದಲ್ಲಿ ಸದರಿರವರ ಇ.ಎಂ.ಡಿ.ಮೊತ್ತವನ್ನು ಮಟ್ಟುಗೋಲು ಹಾಕಿಕೊಂಡು 2 ವರ್ಷದ ಅವಧಿಗೆ ಯಾವುದೇ ಟೆಂಡರ್/ಹರಾಜು/ಕೊಟೇಷನ್‌ನಲ್ಲಿ ಭಾಗವಹಿಸದಂತೆ ಅವರಹೆಸರನ್ನು ಕಪ್ಪು ಪಟ್ಟಿಯಲ್ಲಿ ಸೇರಿಸಲಾಗುವುದು.

**ಸೂಚನೆ**:03 ಸ್ವಚ್ಛತಾ ಗುತ್ತಿಗೆಗಾಗಿ ಕರಾರು ಒಪ್ಪಂದ ಮಾಡಿಕೊಂಡು ,ಒಂದು ವರ್ಷದೊಳಗಾಗಿ ಗುತ್ತಿಗೆಯ ರದ್ದತಿಗೆ ಅರ್ಜಿ ಸಲ್ಲಿಸಿದಲ್ಲಿ ಸದರಿರವರ ಭದ್ರತಾ ಠೇವಣಿ ಮುಟ್ಟುಗೋಲು ಹಾಕಿಕೊಂಡು ಅವರ ಹೆಸರನ್ನು 2 ವರ್ಷದ ಅವಧಿಗೆ ಯಾವುದೇ ಟೆಂಡರ್/ಹರಾಜು/ಕೊಟೇಷನ್‌ನಲ್ಲಿ ಭಾಗವಹಿಸದಂತೆ ಅವರ ಹೆಸರನ್ನು ಕಪ್ಪುಪಟ್ಟಿಯಲ್ಲಿ ಸೇರಿಸಲಾಗುವುದು.

**ಸೂಚನೆ** :04 ಗುತ್ತಿಗೆದಾರರು ಒಂದು ವರ್ಷದ ನಂತರ ಗುತ್ತಿಗೆಯನ್ನು ರದ್ದುಪಡಿಸಲು ಆರು ತಿಂಗಳ ಮುಂಚಿತವಾಗಿ ಮನವಿ ಪತ್ರ ಸಲ್ಲಿಸುವುದು.

**ಸೂಚನೆ**:05 ಟೆಂಡರ್/ಹರಾಜ್ ಅಥವಾ ಟೆಂಡರ್/ಹರಾಜ್/ಸಂಧಾನ ಮಾತುಕತೆಗೆ ಭಾಗವಹಿಸಲು ಬಯಸುವ ಬೇಡಿಕೆದಾರರು ಯಾವುದೇ ಕ್ರಿಮಿನಲ್ ಮೊಕದ್ದಮೆಯಲ್ಲಿ ಭಾಗಿಯಾಗಿರುವ ಕುರಿತು ತಿಳಿದು ಬಂದಲ್ಲಿ ಅಂತಹ ಬೇಡಿಕೆದಾರರ ಆಯ್ಕೆಯನ್ನು / ಬೇಡಿಕೆಯನ್ನು ಪರಿಗಣಿಸುವ / ತಿರಸ್ಕರಿಸುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಒಂದು ವೇಳೆ ಬೇಡಿಕೆದಾರರು ಸಂಸ್ಥೆಯೊಂದಿಗೆ ಕರಾರು ಒಪ್ಪಂದ ಮಾಡಿಕೊಂಡು ಪರವಾನಗಿ ನಡೆಸುತ್ತಿರುವ ಅವಧಿಯಲ್ಲಿಯೂ ಸಹ ಯಾವುದೇ ಕ್ರಿಮಿನಲ್ ಮೊಕದ್ದಮೆಯಲ್ಲಿ ಭಾಗಿಯಾಗಿರುವ ಕುರಿತು ತಿಳಿದು ಬಂದಲ್ಲಿ, ಅವರ ಕರಾರು ಒಪ್ಪಂದವನ್ನು ರದ್ದುಪಡಿಸುವ ಅಥವಾ ಮುಂದುವರೆಸುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಇದಕ್ಕೆ ಆಯ್ಕೆಯಾದ ಪರವಾನಗಿದಾರರು ತಾವುಗಳು ಯಾವುದೇ ಕ್ರಿಮಿನಲ್ ಮೊಕದ್ದಮೆಯಲ್ಲಿ ಭಾಗಿಯಾಗಿರುವುದಿಲ್ಲವೆಂದು ಮುಚ್ಚಳಿಕೆ ಪತ್ರವನ್ನು ಸಹ ಆಯ್ಕೆ ಸಮಯದಲ್ಲಿ ಸಂಸ್ಥೆಗೆ ಸಲ್ಲಿಸತಕ್ಕದ್ದು.

**ಸೂಚನೆ**:06 ಬಸ್ ನಿಲ್ದಾಣದ ಸ್ವಚ್ಛತೆ ಬಗ್ಗೆ ಹೆಚ್ಚಿನ ಗಮನ ಹರಿಸುವುದು ಕಡ್ಡಾಯವಾಗಿದೆ. ಸ್ವಚ್ಛತೆ ಇಲ್ಲದೇ ಇರುವ ಬಗ್ಗೆ ದೂರುಗಳು ಬಂದಲ್ಲಿ ಸಂಸ್ಥೆಯ ನಿಯಮಾವಳಿಗಳನ್ವಯ ಕ್ರಮ ಜರುಗಿಸಲಾಗುವುದು

**ಸೂಚನೆ**:07 **ಕೇಂದ್ರ ಬಸ್ ನಿಲ್ದಾಣಗಳ ಶೌಚಾಲಯ/ಮೂತ್ರಾಲಯ/ಬಯಲು ಮೂತ್ರಾಲಯ ಹಾಗೂ ಆಚರಣದ ಸ್ವಚ್ಛತಾ ಗುತ್ತಿಗೆ ನಿರ್ವಹಣೆಗೆ ಆಯ್ಕೆಯಾದ ಗುತ್ತಿಗೆದಾರರು ಶೌಚಾಲಯಗಳನ್ನು ಉಪಯೋಗಿಸುವ ಸಾರ್ವಜನಿಕ ಪ್ರಯಾಣಿಕರಿಂದ ಕೇವಲ ರೂ. 3.00 (ಮೂರು ರೂ.ಗಳನ್ನು ಮಾತ್ರ) ಗಳನ್ನು ಮಾತ್ರ ಪಡೆಯಬಹುದಾಗಿರುತ್ತದೆ.**
ಮೂತ್ರಾಲಯ ಉಪಯೋಗಿಸುವವರಿಂದ ಯಾವುದೇ ಶುಲ್ಕ ಪಡೆಯವಂತಿಲ್ಲ.

8) ತಾಲೂಕಾ ಮಟ್ಟದ ಬಸ್ ನಿಲ್ದಾಣಗಳಲ್ಲಿನ ಮೂತ್ರಾಲಯ/ಶೌಚಾಲಯ ಹಾಗೂ ನಿಲ್ದಾಣಗಳ ಆವರಣದ ಸ್ವಚ್ಛತೆಗಾಗಿ ತಾಲೂಕಾ ವ್ಯಾಪ್ತಿಯಲ್ಲಿ ಬರುವ ಇನ್ನೀತರ ಸಾಮಾನ್ಯ ಬಸ್ ನಿಲ್ದಾಣಗಳ ಸ್ವಚ್ಛತೆಯನ್ನು ಆಯ್ಕೆಯಾದ ಗುತ್ತಿಗೆದಾರರೇ ನಿರ್ವಹಣೆ ಮಾಡಬೇಕು. ಬೇಡಿಕೆ ಸಲ್ಲಿಸಿದ ಮೊತ್ತವನ್ನು ಅವಧಿ ಮುಗಿಯುವವರೆಗೆ (ಶೇ.10% ರಷ್ಟು ಹೆಚ್ಚಳದೊಂದಿಗೆ) ಪಾವತಿಸುವುದು.

9) ಈ ಕಾರ್ಯಕ್ಕಾಗಿ ಆಯ್ಕೆಯಾಗುವ ಗುತ್ತಿಗೆದಾರರು/ಸಂಘ ಸಂಸ್ಥೆಗಳು ತಮ್ಮ ಸ್ವಂತ ಖರ್ಚಿನಿಂದಲೇ ನಿಲ್ದಾಣದ ಕಸಕಡ್ಡಿಗಳನ್ನು ನಿಲ್ದಾಣದಿಂದ ಹೊರಸಾಗಿಸುವ ವ್ಯವಸ್ಥೆ ಮಾಡಿಕೊಳ್ಳುವುದು. ಹಾಗೂ ಶೌಚಾಲಯಗಳನ್ನು ತಮ್ಮ ಸ್ವಂತ ಖರ್ಚಿನಿದಂಲೇ ಸೆಪ್ಟಿಂಕ್ ಟ್ಯಾಂಕ್‌ನ್ನು ಯಂತ್ರದ ಮೂಲಕ ಸ್ವಚ್ಛತೆ ಮಾಡುವುದು. ಆಸಿಡ್, ನ್ಯಾಪ್ತಲಿನ್ ಬಾಲ್ಸ್ ,ಇತ್ಯಾದಿಗಳನ್ನು

ಬಳಸಿ ಸ್ವಚ್ಛವಾಗಿರಿಸಿ ನಿಲ್ದಾಣದ ಶೌಚಾಲಯ ಹಾಗೂ ಮೂತ್ರಾಲಯದ ಸ್ವಚ್ಛತೆ ಬಗ್ಗೆ ಹೆಚ್ಚಿನ ಗಮನಹರಿಸಿ ಸಾರ್ವಜನಿಕರಿಂದ ದೂರುಗಳಿಗೆ ಆಸ್ಪದವಿಲ್ಲದಂತೆ ಕಾರ್ಯನಿರ್ವಹಿಸುವುದು.ಹಾಗೂ ಈ ಕಾರ್ಯಕ್ಕೆ ತಗಲುವ ನೀರಿನ ಹಾಗೂ ವಿದ್ಯುತ್ ವೆಚ್ಚಗಳನ್ನು .ಮತ್ತು ಇ.ಎಸ್.ಐ.ಗಳನ್ನು ಗುತ್ತಿಗೆದಾರರೇ ಭರಿಸತಕ್ಕದ್ದು. ಮತು ಆಯ್ಕೆಯಾದ ಗುತ್ತಿಗೆದಾರರು,ಮಾಸಿಕ ಗುತ್ತಿಗೆ ಹಣದ ಜೊತೆಗೆ ಶೇ.೧೮.೦೦ % ರಷ್ಟು ಜಿ.ಎಸ್.ಟಿ ಯನ್ನು ಅಥವಾ ಸರ್ಕಾರ ವಿಧಿಸುವ ತೆರಿಗೆಯನ್ನು ಪ್ರತಿ ತಿಂಗಳು ೭ ನೇ ತಾರೀಖೊಳಗಡೆ ಪಾವತಿಸಬೇಕಾಗುತ್ತದೆ.

10) **ಸುಪರ್ ಮಾರ್ಕೇಟ, ಸಿಟಿ ಬಸ್ ನಿಲ್ದಾಣ ಕಾಮಗಾರಿ ಕೆಲಸ ಪ್ರಗತಿಯಲ್ಲಿದ್ದು. ಸದರಿ ಬಸ್ ನಿಲ್ದಾಣದ ಶೌಚಾಲಯ/ಮೂತ್ರಾಲಯಗಳನ್ನು ಯಥಾಸ್ಥಿತಿಯಲ್ಲಿ ನೀಡಲಾಗುವುದು ಕಾಮಗಾರಿ ಕೆಲಸ ಪೂರ್ಣಗೊಂಡನಂತರ ಸದರಿ ಶೌಚಾಲಯ/ಮೂತ್ರಾಲಯಗಳನ್ನು ತೆಗೆದು ಹಾಕಲಾಗುವುದು, ಹೊಸದಾಗಿ ನಿರ್ಮೀಸಲಾದ ಶೌಚಾಲಯ/ಮೂತ್ರಾಲಯಗಳಿಗೆ ಹೊಸದಾಗಿ ಟೆಂಡರ್ ಕರೆಯಲಾಗುವುದು ಆವಾಗ ಗುತ್ತಿಗೆದಾರರು ಹೊಸದಾಗಿ ನಿರ್ಮೀಸಲಾದ ಶೌಚಾಲಯ/ಮೂತ್ರಾಲಯಗಳಿಗೆ ಯಾವುದೇ ಹಕ್ಕು ಮಂಡಿಸುವಂತಿಲ್ಲ.**

11) ಆಯ್ಕೆಯಾಗುವ ಗುತ್ತಿಗೆದಾರರು ಈ ಕೆಳಗಿನಂತೆ ಇರುವ ಸ್ವಚ್ಛತಾ ಸಾಮಾಗ್ರಿಗಳಿಂದ ಬಸ್ ನಿಲ್ದಾಣವನ್ನು ಪ್ರತಿ ದಿವಸ ಸ್ವಚ್ಛವಾಗಿಟ್ಟುಕೊಳ್ಳುವುದು ಕಡ್ಡಾಯವಾಗಿರುತ್ತದೆ.

(a) Floor scrubber (b) Floor cleaning machine
(c) Disinfectant spraying machine (d) Any other equipements required for cleaning the floor &toilets,

**ಸೂಚನೆ :11 ಈ ಮೇಲಿನ ಅಂಶಗಳಲ್ಲದೆ ಸ್ವಚ್ಛತಾ ಗುತ್ತಿಗೆದಾರರು ನಿರ್ವಹಿಸಬೇಕಾದ ಕರ್ತವ್ಯಗಳು:-**

- ಬಸ್ ನಿಲ್ದಾಣವನ್ನು ಮತ್ತು ಸಿಬ್ಬಂದಿ ವಿಶ್ರಾಂತಿ ಗೃಹವನ್ನು ೨೪ ಗಂಟೆ ಶುಚಿಯಾಗಿ ಇಡುವುದು.
- ಶೌಚಾಲಯ ಮತ್ತು ಮೂತ್ರಾಲಯಗಳನ್ನು ಸ್ವಚ್ಛವಾಗಿರಿಸುವುದು.
- ಪೇಪರ್,ಹಣ್ಣಿನ ಸಿಪ್ಪೆ, ಸಣ್ಣಕಲ್ಲುಗಳು,ಹಾಗೂ ಇತರೆ ವಸ್ತುಗಳನ್ನು ತೆಗೆದು ನೆಲವನ್ನು ಒರೆಸುವುದು.
- ಗುತ್ತಿಗೆದಾರರು,Disinfectant ಗಳನ್ನು ತಮ್ಮ ಸ್ವಂತಖರ್ಚಿನಲ್ಲಿಯೇ ಪ್ರತಿ ಎರಡು ದಿವಸಕ್ಕೊಮ್ಮೆ ರಾತ್ರಿ ಹೊತ್ತಿನಲ್ಲಿ ಅಳವಡಿಸುವುದು,ಬಸ್ ನಿಲ್ದಾಣದ ನೆಲ ಹಾಸನ್ನು ದಿನಂ ಪ್ರತಿ ಕನಿಷ್ಟ ೩ ಬಾರಿ Detergent ಗಳನ್ನು ಉಪಯೋಗಿಸಿ, ಸ್ವಚ್ಛಗೊಳಿಸುವುದು, ಬಸ್ ನಿಲ್ದಾಣದ ಚರಂಡಿಗಳನ್ನು ಸ್ವಚ್ಛಗೊಳಿಸುವುದು.
- ಶೇಖರಿಸಿ ಗುಡ್ಡೆ ಹಾಕಿರುವ Garbage ಅನ್ನು ವ್ಯವಸ್ಥಿತವಾಗಿ ಗುತ್ತಿಗೆದಾರರು,ತಮ್ಮ ಸ್ವಂತಖರ್ಚಿನಲ್ಲಿ ಹೊರಸಾಗಿಸಬೇಕು.
- ಮಲನಾಶಕ ತೊಟ್ಟಿಯಲ್ಲಿ Black soil ಅನ್ನು ಮತು ಇತರೆ ತ್ಯಾಜ್ಯ ವಸ್ತುಗಳನ್ನು ಮಲನಾಶಕ ಕೊಳವೆಗಳನ್ನು ಮತ್ತು ಪರಿವೀಕ್ಷಣಾ ಗುಂಡಿಗಳನ್ನು ಯಂತ್ರಗಳ ಸಹಾಯದಿಂದ ಚೆಂಬರ್‌ಗಳನ್ನು ಸ್ವಚ್ಛಗೊಳಿಸಿ ವಸ್ತುಗಳನ್ನು ಶುಚಿತ್ವ ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿಯೇ ಹೊರಸಾಗಿಸಬೇಕು
- Urinals & Wash basin ಗಳಿಗೆ Napthalene ಗುಳಿಗೆಗಳನ್ನು ದಿನಕ್ಕೊಮ್ಮೆ ಬದಲಿಸುವುದು.
- ಬಾಲಕಾರ್ಮಿಕರ ನೇಮಕ ನಿಷೇಧಿಸಲಾಗಿದ್ದು, ಯಾವುದೇಕಾರಣಕ್ಕೂ ಬಾಲ ಕಾರ್ಮಿಕರನ್ನು ನಿಯೋಜಿಸಿಕೊಳ್ಳಬಾರದು, ಒಂದು ವೇಳೆ ಬಾಲ ಕಾರ್ಮಿಕರನ್ನು ನಿಯೋಜಿಸಿಕೊಂಡ ಕುರಿತು ತಿಳಿದು ಬಂದಲ್ಲಿ ಕೂಡಲೆ ಪರವಾನಗಿಯನ್ನು ರದ್ದುಪಡಿಸಲಾಗುವುದು.
- ಮಹಿಳಾ ಶೌಚಾಲಯಗಳ/ಮೂತ್ರಾಲಯಗಳ ಸ್ವಚ್ಛತಾ ನಿರ್ವಹಣೆಗೆ ಮಹಿಳಾ ಕಾರ್ಮಿಕರನ್ನೇ ನೇಮಿಸತಕ್ಕದ್ದು. ಈ ಕುರಿತು ದೂರುಗಳ ಬಂದಲ್ಲಿ ಸಂಸ್ಥೆಯ ನಿಯಮಾವಳಿಗಳನ್ವಯ ಕ್ರಮ ಜರುಗಿಸಲಾಗುವುದು.
- ದಿನಕ್ಕೆ ಮೂರು ಬಾರಿ ಶೌಚಾಲಯವನ್ನು ನೀರಿನಿಂದ ಸ್ವಚ್ಛಗೊಳಿಸುವುದು.
- ಈ ಹಿಂದೆ ಸಂಸ್ಥೆಯ ವಿರುದ್ಧ ನ್ಯಾಯಾಲಯಗಳಲ್ಲಿ ಮೊಕದ್ದಮೆ ಹೂಡಿ, ಕಪ್ಪು ಪಟ್ಟಿಯಲ್ಲಿ ಸೇರಿಸಿದ ವ್ಯಕ್ತಿಗಳು/ಸಂಘ ಸಂಸ್ಥೆಗಳು ಟೆಂಡರ್ ನಲ್ಲಿ ಭಾಗವಹಿಸಲು ಅರ್ಹರಲ್ಲ.
- ಆಯ್ಕೆಯಾದ ಸ್ವಚ್ಛತಾ ಗುತ್ತಿಗೆದಾರರು ವಿಭಾಗದ ಎಲ್ಲಾ ಬಸ್ ನಿಲ್ದಾಣದ ಆವರಣ ಸ್ವಚ್ಛತೆಗಾಗಿ ೦೮.೦೦ ಗಂಟೆಗಳ ಕೆಲಸದ ಆಧಾರದ ಮೇಲೆ ಯಾಂತ್ರೀಕೃತ ಸ್ವಚ್ಛತೆಗೆ (Machanised cleaning) ಸ್ವಚ್ಛತಾ ಗುತ್ತಿಗೆದಾರರು ಪ್ರತಿ ಬಸ್ ನಿಲ್ದಾಣಕ್ಕೆ ಕನಿಷ್ಠ ೨ ಜನ ಕಾರ್ಮಿಕರನ್ನು ಹಾಗೂ ಪ್ರತಿ ೪೦೦೦.೦೦ ಚ.ಅಡಿ/ ಅದರ ಬಾಗಶಃ ಬಾಗಕ್ಕೆ ಒಬ್ಬರಂತೆ ಪ್ರತಿಯೊಂದು ಪಾಳೆಯಲ್ಲಿ ಸ್ವಚ್ಛತಾ ಕಾರ್ಮಿಕರನ್ನು ನಿಯೋಜಿಸಿ (೨) ಎರಡು ಪಾಳೆಯಲ್ಲಿ ಸ್ವಚ್ಛತಾ ಗುತ್ತಿಗೆಯ ಕಾರ್ಯ ನಿರ್ವಹಿಸತಕ್ಕದ್ದು.
- ಶೌಚಾಲಯ ಮೂತ್ರಾಲಯ ಬಸ್ಸು ನಿಲ್ದಾಣದ ಸ್ವಚ್ಛತೆಯ ಗುತ್ತಿಗೆಗಾಗಿ ಅರ್ಜಿಸಲ್ಲಿಸುವವರು ಸ್ವಚ್ಛತಾ ಕೆಲಸಕ್ಕೆ ನೇಮಿಸಿಕೊಳ್ಳುವ ಕೆಲಸಗಾರರಿಗೆ ಹಾಗೂ ಉಪಹಾರ ಗೃಹದ ಕೆಲಸಗಾರರು ಕನಿಷ್ಠ ವೇತನದ ಕಾಯ್ದೆ ಪ್ರಕಾರ ವೇತನದ ಭವಿಷ್ಯ ನಿಧಿ,ಇತ್ಯಾದಿ ಮೂಲ ಭೂತ ಸೌಲಭ್ಯವುಳ್ಳವರನ್ನು ನಿಯೋಜಿಸಬೇಕಾಗುತ್ತದೆ. ತಾವು ನಿಯೋಜಿಸುವ ಪ್ರತಿ ಕೆಲಸಗಾರರ ಹೆಸರಿನಲ್ಲಿ ಭವಿಷ್ಯ ನಿಧಿ ವಂತಿಕೆ ಪಾವತಿಸುವ ದಾಖಲಾತುಗಳನ್ನು ಒಪ್ಪಿಸಬೇಕು. ತಪ್ಪಿದಲ್ಲಿ ಭವಿಷ್ಯ ನಿಧಿ ಕಾಯ್ದೆಯಡಿಯಲ್ಲಿ ವಿಧಿಸುವ ದಂಡಕ್ಕೆ ಮತ್ತು ಮುಂದಾಗುವ ತೊಂದರೆಗಳಿಗೆ ಗುತ್ತಿಗೆದಾರರೇ ಹೊಣೆಗಾರರಾಗಿದ್ದು ಸಂಸ್ಥೆಯು ಜವಾಬ್ದಾರಿಯಾಗಿರುವುದಿಲ್ಲ.
- ಶೌಚಾಲಯಗಳನ್ನು ಉಪಯೋಗಿಸುವ ದರಗಳ ಫಲಕವನ್ನು ಶೌಚಾಲಯದ ಎದುರುಗಡೆ ಕಡ್ಡಾಯವಾಗಿ ಪ್ರದರ್ಶಿಸುವುದು

12) ನಿಲ್ದಾಣದಲ್ಲಿನ ಸೆಪ್ಟಿಕ್‌ಟ್ಯಾಂಕ್ ಸ್ವಚ್ಛಗೊಳಿಸಲು ಕಡ್ಡಾಯವಾಗಿ ನಗರಸಭೆಯ ಸ್ವಚ್ಛತಾಯಂತ್ರ ಬಳಸುವುದು. ಯಾವುದೇ ಕಾರಣಕ್ಕೂ ಸ್ವಚ್ಛತಾ ಕಾರ್ಮಿಕರನ್ನು ಈಕಾರ್ಯಕ್ಕೆ ನಿಯೋಜಿಸುವಂತಿಲ್ಲ.ಹಾಗೂ ಮಲ/ಮೂತ್ರವನ್ನು ಮಾನವರಿಂದ ಹೊರ ಸಾಗಿಸುವುದು ನಿಷೇಧವಾಗಿರುತ್ತದೆ, ಒಂದು ವೇಳೆ ಮಾನವ ಕೈಗಳಿಂದ ಮಲ/ಮೂತ ಸಾಗಿಸುತ್ತಿರುವುದು ಕಂಡು ಬಂದಲ್ಲಿ ಸಂಸ್ಥೆಯ ನಿಯಮಾವಳಿಗಳನ್ವಯ /ಸರ್ಕಾರದ ನೀತಿ/ನಿಯಮಗಳನ್ವಯ ಸೂಕ್ತ ಕ್ರಮ ಜರುಗಿಸಲಾಗುವುದು.

13) ಸಹಾಯಕ ಕಾರ್ಮಿಕ ಆಯುಕ್ತರ ಕಛೇರಿಯಿಂದ ಶುಚಿತ್ವ ಗುತ್ತಿಗೆದಾರರೆಂದು ಹೆಸರು ನೊಂದಾಯಿಸಿರುವ ಬಗ್ಗೆ ದೃಢೀಕರಣ ಪತ್ರವನ್ನು ಸಲ್ಲಿಸಬೇಕು.

14) ಯಶಸ್ವಿ ಬಿಡ್ಡುದಾರರು ತನ್ನ ವೈಯಕ್ತಿಕ ಕೆಲಸಗಾರರಿಗೆ ಗುರುತಿನ ಚೀಟಿ (ಐ.ಡಿ) ಮತ್ತು ಮಾನದಂಡಗಳ ಪ್ರಕಾರ ಕೈಗವಸುಗಳು, ಮುಖವಾಡ, ಏಪ್ರನ್.ಸಮವಸ್ತ್ರ ಮತ್ತು ಇತರೆ ಸುರಕ್ಷತಾ ಸಾಧನೆಗಳು/ ಗ್ಯಾಜೆಟ್ ಗಳನ್ನು ಒದಗಿಸಬೇಕು.

15) ಇ-ಪ್ರಕ್ಯೂರ್ ಮೆಂಟ್ ಮೂಲಕ ಟೆಂಡರನಲ್ಲಿ ಭಾಗವಹಿಸುವ ಅರ್ಜಿದಾರರು ತಮ್ಮ ವಿಳಾಸವನ್ನು ಸರಿಯಾಗಿ ನಮೂದಿಸಬೇಕು ಮತ್ತು ವಿಳಾಸದ ದೃಢೀಕರಣ ಪತ್ರದ ನಕಲನ್ನು ಮತ್ತು ಪಾನ್ ಕಾರ್ಡ ನಕಲು ಪ್ರತಿಯನ್ನು ಸಹ ಸಲ್ಲಿಸಬೇಕು..

16) ಕನ್ನಡದಲ್ಲಿ ಮಾತಾಡಬಲ್ಲ ಕೆಲಸಗಾರರನ್ನು /ಮೇಲ್ವಿಚಾರಕರನ್ನು ಮಾತ್ರ ನಿಯೋಜಿಸಬೇಕು.

17) ಸ್ವಚ್ಚತಾ ಗುತ್ತಿಗೆಯನ್ನು ಉಪಗುತ್ತಿಗೆ ನೀಡುವಂತಿಲ್ಲ. ಒಂದು ವೇಳೆ ಉಪಗುತ್ತಿಗೆಯ ಮೇಲೆ ನೀಡಿರುವುದು ಕಂಡುಬಂದಲ್ಲಿ ಸ್ವಚ್ಚತಾ ಪರವಾನಗಿಯನ್ನು ರದ್ದುಪಡಿಸಿ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು, 2 ವರ್ಷದ ಅವಧಿಗೆ ಯಾವುದೇ ಟೆಂಡರ/ ಹರಾಜು / ಕೊಟೇಶನ್‌ನಲ್ಲಿ ಭಾಗವಹಿಸಿದಂತೆ ಕಪ್ಪು ಪಟ್ಟಿಯಲ್ಲಿ ಸೇರಿಸಲಾಗುವುದು.

18) ಸ್ವಚ್ಚತಾ ಗುತ್ತಿಗೆಗಾಗಿ ಕರಾರು ಒಪ್ಪಂದ ಮಾಡಿಕೊಂಡು ,ಒಂದು ವರ್ಷದೊಳಗಾಗಿ ಗುತ್ತಿಗೆಯ ರದ್ದತಿಗೆ ಅರ್ಜಿ ಸಲ್ಲಿಸಿದಲ್ಲಿ ಸದರಿರವರ ಭದ್ರತಾ ಠೇವಣಿ ಮುಟ್ಟುಗೋಲು ಹಾಕಿಕೊಂಡು ಅವರ ಹೆಸರನ್ನು 2 ವರ್ಷದ ಅವಧಿಗೆ ಯಾವುದೇ ಟೆಂಡರ್/ಹರಾಜು/ಕೊಟೇಷನ್‌ನಲ್ಲಿ ಭಾಗವಹಿಸದಂತೆ ಅವರ ಹೆಸರನ್ನು ಕಪ್ಪುಪಟ್ಟಿಯಲ್ಲಿ ಸೇರಿಸಲಾಗುವುದು. ಗುತ್ತಿಗೆದಾರರು ಒಂದು ವರ್ಷದ ನಂತರ ಗುತ್ತಿಗೆಯನ್ನು ರದ್ದುಪಡಿಸಲು ಆರು ತಿಂಗಳ ಮುಂಚಿತವಾಗಿ ಮನವಿ ಪತ್ರ ಸಲ್ಲಿಸುವುದು.

19) ಗುತ್ತಿಗೆದಾರರು ಒಂದು ವರ್ಷದ ನಂತರ ಗುತ್ತಿಗೆಯನ್ನು ರದ್ದುಪಡಿಸಲು 6 ತಿಂಗಳ ಮುಂಚಿತವಾಗಿ ಮನವಿ ಪತ್ರ ಸಲ್ಲಿಸುವುದು.

20) ಸ್ವಚ್ಚತೆ ನಿರ್ವಹಣೆಯು ಅಸಮರ್ಪಕವಾಗಿ ಕಂಡುಬಂದಲ್ಲಿ ಒಂದು ಬಾರಿ ನೋಟಿಸ್ ಜಾರಿ ಮಾಡಲಾಗುವುದ. ಸ್ವಚ್ಚತಾ ನಿರ್ವಹಣೆಯು ಸಾಧಾರಣ ಕಂಡುಬಂದಲ್ಲಿ, ಪ್ರತಿ ಅಪರಾಧಕ್ಕೆ ರೂ.1,500/- ದಂಡ ವಿಧಿಸಿ ಮೂರು ಬಾರಿ ಸೂಚನಾ ಪತ್ರ ಜಾರಿ ಮಾಡಲಾಗುವುದು .ಸ್ವಚ್ಛತೆ ನಿರ್ವಹಣೆಯಲ್ಲಿ ಮತ್ತೆ ನಿಷ್ಕಾಳಜಿತನ ಕಂಡು ಬಂದಲ್ಲಿ ದಂಡ ರೂ.3,000/- ರಂತೆ ವಿಧಿಸಿ 02 ಬಾರಿ ಸೂಚನಾ ಪತ್ರ ಜಾರಿಗೊಳಿಸಲಾಗುವುದು. ದಂಡ ವಿಧಿಸಿದರೂ ಯಾವುದೇ ಸುಧಾರಣೆ ಕಂಡು ಬರದಿದ್ದಲ್ಲಿ, ಅಂತಿಮವಾಗಿ ರೂ.4500/- ಗಳಂತೆ ದಂಡ ವಿಧಿಸಿ, ಒಂದು ಬಾರಿ ಸೂಚನಾ ಪತ್ರ ಜಾರಿಗೊಳಿಸಲಾಗುವುದು. 07 ಬಾರಿ ಸೂಚನಾ ಪತ್ರ ಜಾರಿಗೊಳಿಸಿದರು ಸ್ವಚ್ಚತಾ ನಿರ್ವಹಣೆಯಲ್ಲಿ ಪ್ರಗತಿಕಂಡುಬರದಿದ್ದಲ್ಲಿ ಸಂಸ್ಥೆಯ ನಿಯಮಾವಳಿಯಂತೆ ಗುತ್ತಿಗೆಯ ಕರಾರು ಒಪ್ಪಂದ ರದ್ದುಗೊಳಿಸಲಾಗುವುದು.

21) ಶೌಚಾಲಯ ಉಪಯೋಗಿಸುವವರಿಂದ ಹೆಚ್ಚಿನ ಶುಲ್ಕ ಪಡೆದಲ್ಲಿ ಅಥವಾ ಮೂತ್ರಾಲಯ ಉಪಯೋಗಿಸುವವರಿಂದ ಶುಲ್ಕ ಪಡೆದಲ್ಲಿ ಪ್ರತಿ ಅಪರಾಧಕ್ಕಾಗಿ ಮೊದಲು ರೂ.100/- ಗಳನ್ನು ಹತ್ತು ಬಾರಿ ದಂಡ ವಿಧಿಸಲಾಗುವುದು ಮತ್ತು ಪ್ರತಿ ಅಪರಾಧಗಳಿಗೆ ರೂ.200/ ಗಳನ್ನು ಹತ್ತು ಬಾರಿ ದಂಡವನ್ನಾಗಿ ವಿಧಿಸಲಾಗುವುದು. ಇಪ್ಪತ್ತು ಬಾರಿ ದಂಡ ವಿಧಿಸಲಾಗಿಯೂ ಸುಧಾರಣೆ ಕಂಡು ಬರದಿದ್ದಲ್ಲಿ ಪುನಃ ಈ ಕುರಿತು ದೂರುಗಳು ಬಂದಲ್ಲಿ ಪರವಾನಗಿಯನ್ನು ರದ್ದು ಪಡಿಸಲಾಗುವುದು,

22) ಸಂಸ್ಥೆಯ ಅಧಿಕಾರಿಗಳು ಬಸ್ ನಿಲ್ದಾಣದ ತಪಾಸಣೆಗೆ ಬರುವ ಮುಂಚೆ ಪ್ರತಿ ದಿವಸ ಶೌಚಾಲಯ/ಮೂತ್ರಾಲಯಗಳನ್ನು ಯಾಸಿಡ್‌ನಿಂದ ತೊಳೆದು ಸ್ವಚ್ಚವಾಗಿರಿಸಬೇಕು.

23) ಹಿರಿಯ ಅಧಿಕಾರಿಗಳು ಬಸ್ ನಿಲ್ದಾಣದ ತಪಾಸಣೆಗೆ ಬಂದಾಗ ಬಸ್ ನಿಲ್ದಾಣವನ್ನು ಸ್ವಚ್ಚವಾಗಿರಿಸದೇ ಇದ್ದುದು ಕಂಡು ಬಂದಲ್ಲಿ ಸಾಮಾನ್ಯ ಸ್ಥಾಯೀ ಆದೇಶ 493/01 ರ ಪ್ರಕಾರ ಮೂರು ಬಾರಿ ದಂಡವನ್ನು ವಿಧಿಸಲಾಗುವುದು.

24) ಇ-ಪ್ರಕ್ಯೂರ್ಮೆಂಟ್ ಮೂಲಕ ಟೆಂಡರ್ ಅರ್ಜಿ ಸಲ್ಲಿಸಿ ಭಾಗವಹಿಸಿ ಸದರಿ ಶೌಚಾಲಯ ಗುತ್ತಿಗೆಗೆ ಅತಿ ಹೆಚ್ಚಿನ ಮಾಸಿಕ ಪರವಾನಗಿ ಶುಲ್ಕ ಘೋಷಿಸಿ ಟೆಂಡರ್ ನಿಯಮಗಳನ್ನು ಪೂರೈಸಿದ ಅಭ್ಯರ್ಥಿಗಳು ಅಂದೇ ತಾವು ಘೋಷಿಸಿರುವ ಮೊತ್ತಕ್ಕೆ ಮೂರು (3) ತಿಂಗಳಿಗೆ ಸರಿಹೊಂದುವ ಮೊತ್ತವನ್ನು ಡಿ.ಡಿ.ಮೂಲಕ ಅಥವಾ ನಗದಾಗಿ ಅಂದೇ ಭದ್ರತಾ ಠೇವಣಿಯಾಗಿ ಪಾವತಿಸಿ ಆಯ್ಕೆಯ 03 ದಿನಗಳ ನಂತರ ಪುನ: ಇದೇ ಮೊತ್ತವನ್ನೇ ಡಿ.ಡಿ./ನಗದಾಗಿ ಒಟ್ಟು ಆರು ತಿಂಗಳ ಭದ್ರತಾ ಠೇವಣಿಯಾಗಿ(ಆರು ತಿಂಗಳಿಗೆ ಆಗುವ ಸೇವಾ ಶುಲ್ಕದ ಮೊತ್ತ 15.00% ರಂತೆ ಅಥವಾ ಸರ್ಕಾರ ವಿಧಿಸುವ ತೆರಿಗೆಯನ್ವಯ ಪ್ರತಿ ತಿಂಗಳ ಲೆಕ್ಕಾಚಾರದಲ್ಲಿ ಸೇರಿಸಿ ಸರಿಹೊಂದುವಂತೆ) ಸಲ್ಲಿಸುವುದರ ಜೊತೆಗೆ ಸದರಿ ಭದ್ರತಾ ಠೇವಣಿಗೆ ಮತ್ತು ತಾತ್ಕಾಲಿಕ ಅವಧಿಗೆ ಸಂದಾಯ ಮಾಡುವ ಮಾಸಿಕ ಶುಲ್ಕಕ್ಕೆ ಒಟ್ಟು ಮೊತ್ತದ ಶೇ.1% ರಷ್ಟು ಸ್ಟಾಂಪ್ ಶುಲ್ಕವನ್ನು ಪಾವತಿಸಿ ಸಂಸ್ಥೆಯು ನಿಗದಿಪಡಿಸುವ ದಿನಾಂಕದಂದು ಆದಾಯ ತೆರಿಗೆ ಮತ್ತು ಮಾರಾಟ ತೆರಿಗೆ ತಿರುವಳಿಗಳನ್ನು ಸಲ್ಲಿಸಿ ತಮ್ಮಸ್ವಂತ ಖರ್ಚಿನಲ್ಲಿಯೇ ಕರ್ನಾಟಕ ಸ್ಟಾಂಪ್‌ಆಕ್ಟ್ 1957/ಸೆಕ್ಷನ್ 32(ಎ)(111) ಅಡಿಯಲ್ಲಿ ಪರಿಷ್ಕೃತ ಸ್ಟಾಂಪ್‌ಆಕ್ಟ್ ಸಂ:08/2003ರನ್ವಯ ಸ್ಟಾಂಪ್ ಶುಲ್ಕವನ್ನು ಭರಿಸಿ ಸಂಸ್ಥೆಯೊಂದಿಗೆ ಕರಾರು ಮಾಡಿಕೊಳ್ಳುವುದು.ಇದಕ್ಕೆ ತಪ್ಪಿದಲ್ಲಿ ಸದರಿ ಅಭ್ಯರ್ಥಿಗಳು ಸಂಸ್ಥೆಗೆ ಪಾವತಿಸಿರುವ ಒಟ್ಟು ಇ.ಎಂ.ಡಿ. ಮತ್ತು ಭದ್ರತಾ ಠೇವಣಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದೇ ಅಲ್ಲದೇ ಸದರಿಯವರ ಆಯ್ಕೆಯನ್ನು ರದ್ದು ಪಡಿಸಲಾಗುವುದು.

25) ಆಯ್ಕೆಗೊಂಡ ಗುತ್ತಿಗೆದಾರರು ನಿಗದಿತ ಸಮಯದೊಳಗೆ ಕರಾರು ಒಪ್ಪಂದ ಮಾಡಿಕೊಳ್ಳಲು ವಿಫಲರಾದಲ್ಲಿ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಎರಡು ವರ್ಷದ ಅವಧಿಗೆ ಯಾವುದೇ ಟೆಂಡರ್/ಕೊಟೇಶನ್‌ನಲ್ಲಿ ಭಾಗವಹಿಸದಂತೆ ಅವರ ಹೆಸರನ್ನು ಕಪ್ಪು ಪಟ್ಟಿಯಲ್ಲಿ ಸೇರಿಸಲಾಗುವುದು.

26) ಇ-ಟೆಂಡರ್ ಪ್ರಕ್ರಿಯೆಯಲ್ಲಿ (ಅಂತರ ಜಾಲದಲ್ಲಿ) ಆಕಸ್ಮತ್ತಾಗಿ ಉಂಟಾಗುವ ಯಾವುದೇ ತಾಂತ್ರಿಕ ದೋಷಗಳಿಗೆ ಕ.ಕ.ರ.ಸಾ.ಸಂಸ್ಥೆಯ ಜವಾಬ್ದಾರವಾಗುವುದಿಲ್ಲ ಯಾವುದೇ ತಾಂತ್ರಿಕ ತೊಂದರೆ ಉಂಟಾದಲ್ಲಿ ಹೆಲ್ಪ್ ಡೆಸ್ಕ್ ಸಂ:080-23010900/080-23010901 ನ್ನು ಸಂಪರ್ಕಿಸಬಹುದಾಗಿದೆ.

27) The Licensee shall pay the cost of light, power and water utilized by him at the Stall premises as per the demand of the authorities concerned. In case, water supplied by KSRTC from its own sources the Licensee shall pay the cost 2% of the License fee or 50% of cost of power consumed by the motor, drawing water from the open well or bore well whichever is higher within stipulated time. Any delay shall lead to interest as applicable.

28) ಕೆಲವು ಬಸ್ ನಿಲ್ದಾಣಗಳಲ್ಲಿ ನೀರಿನ/ವಿದ್ಯುತ್ ವ್ಯವಸ್ಥೆ ಇಲ್ಲದಿದ್ದಲ್ಲಿ ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಿಂದ ನೀರಿನ/ವಿದ್ಯುತ್ ವ್ಯವಸ್ಥೆ ಮಾಡಿಕೊಳ್ಳಬೇಕು.

29) ಯಶಸ್ವಿ ಟೆಂಡರ್/ಕೊಟೇಷನ್ದಾರರು ಇ- ವೇದಿಕೆ ಮುಖಾಂತರ ಘೋಷಿಸಿ ನಮೂದಿಸಿರುವ ಪರವಾನಗಿ ಶುಲ್ಕದ ಮೇಲೆ ಪ್ರತಿ ವರ್ಷ ಶೇಕಡಾ 10% ರಷ್ಟನ್ನು ಹೆಚ್ಚಿಸಿ ಪರವಾನಗಿ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ತಾತ್ಕಾಲಿಕ ಅವಧಿ ಮುಗಿದ ನಂತರ ಸಂಸ್ಥೆಯಲ್ಲಿ ಬದಲಾಗುವ ನಿಯಮಗಳನ್ವಯ ಹೊಸದಾಗಿ ಇ-ಟೆಂಡರ್/ಕೊಟೇಷನ್ ಆಹ್ವಾನಿಸಲಾಗುವುದು.

30) ಆಯ್ಕೆಯಾದ ಗುತ್ತಿಗೆದಾರರು ಸಂಸ್ಥೆಯು ಆಗಿಂದಾಗ್ಗೆ ವಿಧಿಸುವ ಷರತ್ತು ನಿಬಂಧನೆಗಳಿಗೆ ಬದ್ಧರಾಗಿರಬೇಕು. ಸ್ವಚ್ಛತಾ ಗುತ್ತಿಗೆ ಪಡೆಯಲು ಇಚ್ಛಿಸುವವರು ಎಲ್ಲಾ ಬಸ್ ನಿಲ್ದಾಣಗಳಿಗೆ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಪ್ರತಿ ಬಸ್ ನಿಲ್ದಾಣಕ್ಕೆ ಅರ್ಜಿ ಸಲ್ಲಿಸುವವರು ತಮ್ಮ ಬೇಡಿಕೆಯನ್ನು ಶೂನ್ಯ (0) ಬದಲಾಗಿ ಕಡ್ಡಾಯವಾಗಿ ಕನಿಷ್ಠ ಮೊತ್ತವನ್ನು ನಮೂದಿಸುವುದು. ಸ್ವಚ್ಛತಾ ಕಾರ್ಯಕ್ಕೆ ನಿಗದಿ ಪಡಿಸಲಾದ ಸಂಖ್ಯೆಯಂತೆ ಕಾರ್ಮಿಕರನ್ನು ಪೂರಕ ಸವಲತ್ತುಗಳೊಂದಿಗೆ ನಿಯೋಜಿಸಿ ಅವರುಗಳಿಗೆ ಕನಿಷ್ಟ ವೇತನ ಕಾಯ್ದೆಯನ್ವಯ ವೇತನ ಪಾವತಿ ಮಾಡುವುದಲ್ಲದೇ ಇ.ಎಸ್.ಐ ಹಾಗೂ ಪಿ.ಎಫ್ ಕಾಯ್ದೆಯನ್ವಯ ಪಿ.ಎಫ್ ಕಛೇರಿಯಲ್ಲಿ ನೊಂದಣಿ ಮಾಡಿ ವಂತಿಕೆ ಮಾಡಿದ ಕುರಿತು ಕನಿಷ್ಠ ಆರು(6) ತಿಂಗಳು ಹಣವನ್ನು ಪಾವತಿ ಮಾಡಿರುವುದರ ವರದಿ ಸಲ್ಲಿಸಬೇಕು ಹಾಗೂ ಈ ಕುರಿತು ಪ್ರತಿ ತಿಂಗಳು ಈ ಕಛೇರಿಗೆ ಮಾಹಿತಿ ಸಲ್ಲಿಸಬೇಕು. ಅಲ್ಲದೆ ಕಾರ್ಮಿಕ ಆಯುಕ್ತರ ಕಛೇರಿಯಿಂದ ತಪಾಸಣೆಗೆ ಬಂದಾಗ ಮಾಹಿತಿ ಒದಗಿಸಬೇಕು. ವಿಫಲರಾದಲ್ಲಿ ಮುಂದಾಗುವ ತೊಂದರೆಗಳಿಗೆ ಗುತ್ತಿಗೆದಾರರೇ ಹೊಣೆಗಾರರಾಗಿದ್ದು ಸಂಸ್ಥೆಯು ಜವಾಬ್ದಾರಿಯಾಗುವುದಿಲ್ಲ.

31) ಬಸ್ ನಿಲ್ದಾಣದ ವಿಸ್ತೀರ್ಣಕ್ಕೆ ತಕ್ಕಂತೆ ಸಂಸ್ಥೆಯ ನಿಯಮಾವಳಿಗಳಂತೆ ಸ್ವಚ್ಛತಾ ಕಾರ್ಮಿಕರನ್ನು ನೇಮಿಸುವುದು

32) ಸ್ವಚ್ಛತಾ ಕಾರ್ಮಿಕರು ಕೆಲಸಕ್ಕೆ ಹಾಜರಾದ ಸಂದರ್ಭದಲ್ಲಿ ಬೆಳಗ್ಗಿನ ಹಾಜರಾತಿ ಪಡೆಯುವ ಮುಂಚೆ ಕಾರ್ಮಿಕರಿಗೆ ಸ್ಯಾನಿಟೈಸರ್ ಮತ್ತು ಥರ್ಮಲ್ ಸ್ಕ್ಯಾನಿಂಗ್‌ನಿಂದ ದೇಹದ ತಾಪಮಾನವನ್ನು ಪರಿಶೀಲಿಸಿ ಅಗತ್ಯ ಸುರಕ್ಷತಾ ಪರಿಕರಗಳನ್ನು (ಮಾಸ್ಕ್, ಗ್ಲೌಸ್ , ಗಮ್ ಟ್ಯೂಬ್, ಏಪ್ರಾನ್) ಮತ್ತಿತರೆ ಧರಿಸಿಕೊಂಡು ಸ್ವಚ್ಛ ಕಾರ್ಯ ನಿರ್ವಹಿಸಬೇಕಾಗುತ್ತದೆ.

33) ಸ್ವಚ್ಛತಾ ಕಾರ್ಮಿಕರು ಕೆಲಸ ಮುಗಿಸಿ ಹೊರಡುವ ಸಮಯದಲ್ಲಿ ಮತ್ತೊಮ್ಮೆ ಸ್ಯಾನಿಟೈಸರ್ ಮತ್ತು ಥರ್ಮಲ್ ಸ್ಕ್ಯಾನಿಂಗ್ ನಿಂದ ದೇಹದ ತಾಪಮಾನವನ ಪರಿಶೀಲಿಸಿ ಹ್ಯಾಂಡ್ ವಾಷ್ ಮಾಡಿದ ನಂತರ ಮನೆಗೆ ಕಳುಹಿಸಬೇಕು.

34) ಎಲ್ಲಾ ಸಫಾಯಿ ಕರ್ಮಚಾರಿಗೆ ಕೋವಿಡ್-19 ದಿಂದ ಸುರಕ್ಷಿಸಿಕೊಳ್ಳಲು ಪಿ.ಪಿ.ಇ ಕಿಟ್ ವಿತರಿಸುವುದು.ನುರಿತ ತಜ್ಞ ವೈದ್ಯರಿಂದ ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸುವುದು. ಹಾಗೂ ರೋಗ ನಿರೋಧಕ ಶಕ್ತಿಗಳನ್ನು ಹೆಚ್ಚಿಸಲು ಅಗತ್ಯ ಔಷಧಿಗಳನ್ನು ಉಚಿತವಾಗಿ ನೀಡುವುದು.

35) ಗುತ್ತಿಗರದಾರರು ನಿಯೋಜಿಸಿಕೊಂಡ ಕಾರ್ಮಿಕರಿಗೆ ಸರ್ಕಾರದ ನಿಯಮಗಳನ್ವಯ ಎಲ್ಲಾ ಸೌಲಭ್ಯ ಒದಗಿಸಿರುವ ದಾಖಲೆಗಳನ್ನು ನೀಡಿದಲ್ಲಿ ಮಾತ್ರ ಭದ್ರತಾ ಠೇವಣಿ ಮರುಪಾವತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

36) **<u>ಆಯ್ಕೆ ವಿಧಾನ :</u>**

- ಮೇಲ್ಕಾಣಿಸಿದ ಒಟ್ಟಾರೆ ಬಸ್ ನಿಲ್ದಾಣ ಸೇರಿ ಹೆಚ್ಚಿನ ಮಾಸಿಕ ಬೇಡಿಕೆ ಸಲ್ಲಿಸಿದ ಅರ್ಹ ಗುತ್ತಿಗೆದಾರರಿಗೆ ಆಯ್ಕೆಗೊಳಿಸಲಾಗುವುದು.
- ಇ-ಟೆಂಡರಿನಲ್ಲಿ ನಿಗದಿತ ಮಾಸಿಕ ಪರವಾನಿಗೆ ಶುಲ್ಕಕ್ಕಿಂತ ಹೆಚ್ಚಿನ ಮೊತ್ತವನ್ನು H-1 - H-2 ಬಿಡ್‌ದಾರರು ನಮೂದಿಸಿದ ಸಂದರ್ಭದಲ್ಲಿ H-1 ಬಿಡ್‌ದಾರರು ಕರಾರು ಒಪ್ಪಂದ ಮಾಡಿಕೊಳ್ಳುವದಲ್ಲಿ ಹಿಂದೆ ಸರಿದಲ್ಲಿ / ವಿಫಲರಾದಲ್ಲಿ, ಸದರಿಯವರ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು H-2 ಬಿಡ್‌ದಾರರನ್ನು ಆಯ್ಕೆ ಮಾಡಲು ಕ್ರಮ ಕೈಕೊಳ್ಳಲಾಗುವುದು.
- H-2 ಬಿಡ್‌ದಾರರನ್ನು ಪರವಾನಿಗೆದಾರನ್ನಾಗಿ ಆಯ್ಕೆ ಮಾಡುವಾಗ H-1 ಬಿಡದಾರರು ಬಿಡ್ ಮಾಡಿದ ಮೊತ್ತಕ್ಕೆ ಸಮನಾಗಿ ಪರವಾನಿಗೆ ಶುಲ್ಕವನ್ನು ನೀಡಬೇಕಾಗಿರುತ್ತದೆ ಒಪ್ಪದೆ ಇದ್ದಲ್ಲಿ ಕೇಂದ್ರ ಕಚೇರಿಯ ವಾಣಿಜ್ಯ ಮುಖ್ಯಸ್ಥರ ತಿರ್ಮಾನ ಅಂತಿಮವಾಗಿರುತ್ತದೆ.
- H-2 ಬಿಡ್‌ದಾರರನ್ನು ಪರವಾನಿಗೆದಾರನ್ನಾಗಿ ಆಯ್ಕೆ ಮಾಡುವ / ತಿರಸ್ಕರಿಸುವ ಅಧಿಕಾರವು ಸಂಸ್ಥೆಯು ಕಾಯ್ದಿರಿಸಿಕೊಂಡಿರುತ್ತದೆ.
- ಒಂದುವೇಳೆ H-2 ಬಿಡ್‌ದಾರರಿಗೆ ಅವರು ಬೇಡಿಕೆ ಸಲ್ಲಿಸಿದ ಮೊತ್ತಕ್ಕೆ ಆಯ್ಕೆಗೊಳಿಸಿ ಬಾಕಿ ಮೊತ್ತ ಭರಣಾ ಮಾಡಿ ಕರಾರು ಒಪ್ಪಂದ ಮಾಡಿಕೊಳ್ಳಲು ತಿಳಿಸಿದಾಗ ಅವರು ಬಾಕಿ ಮೊತ್ತ ಹಾಗೂ ಅಗತ್ಯ ದಾಖಲಾತಿಗಳನ್ನು ಸಲ್ಲಿಸಿ ಕರಾರು ಒಪ್ಪಂದ ಮಾಡಿಕೊಳ್ಳಲು ವಿಫಲರಾದಲ್ಲಿ 2ನೇ ಹೆಚ್ಚಿನ ಬಿಡ್‌ದಾರರ ಇ.ಎಂ.ಡಿ ಮೊತ್ತವನ್ನು ಸಂಸ್ಥೆಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
- ಇ-ಟೆಂಡರಿನಲ್ಲಿ ಒಂದಕ್ಕಿಂತ ಹೆಚ್ಚಿನ ಬಿಡ್‌ದಾರರು ಒಂದೇ ಮೊತ್ತವನ್ನು ನಮೂದಿಸಿದಲ್ಲಿ ಅಂತಹ ಬಿಡ್‌ದಾರರೊಂದಿಗೆ ಸಂಧಾನವನ್ನು ನಡೆಸಿ, ಸಂಧಾನದಲ್ಲಿ ಹೆಚ್ಚಿನ ಮೊತ್ತವನ್ನು ನಮೂದಿಸಿದಂತಹ ಬಿಡ್‌ದಾರರನ್ನು ಪರವಾನಿಗೆದಾರನ್ನಾಗಿ ಆಯ್ಕೆ ಮಾಡಲಾಗುವುದು.

ಇ-ಪ್ರಕ್ಯೂರ್ ಮೆಂಟ್ ಮೂಲಕ ಇ-ಟೆಂಡರ್ ತೆರೆಯಲಾಗುವುದು. ವಿವರಗಳಿಗಾಗಿ ವಿಭಾಗೀಯ ಕಛೇರಿ, ಕಕರಸಾಸಂಸ್ಥೆ, ಕಲಬುರಗಿ ವಿಭಾಗ-01, ಕಲಬುರಗಿ ಯನ್ನು ಸಂಪರ್ಕಿಸಲು ಕೋರಲಾಗಿದ್ದು, ಸಂಪರ್ಕಿಸಬಹುದಾದ ದೂರವಾಣಿ ಸಂ: 77609-92102 /9535392265 ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನ್ನು (http://www.eproc.karnataka.gov.in) ಹಾಗೂ ಹೆಲ್ಪ್‌ಡೆಸ್ಕ್ ಸಂ: 080-25201227, 080-25501216 ನ್ನು ಸಂಪರ್ಕಿಸಿ, ಮಾಹಿತಿ ಪಡೆಯಬಹುದಾಗಿರುತ್ತದೆ. ಟೆಂಡರ್/ಹರಾಜ್/ಸಂಧಾನವನ್ನು/ಕೊಟೇಷನ್ ಸ್ವೀಕರಿಸುವ, ತಿರಸ್ಕರಿಸುವ, ಮುಂದೂಡುವ, ಮಾರ್ಪಾಟು ಮಾಡುವ ಅಥವಾ ಯಾವುದೇ ಮುನ್ಸೂಚನೆ ಇಲ್ಲದೆ ಟೆಂಡರ್/ಹರಾಜ್/ಸಂಧಾನ/ಕೊಟೇಷನ್‌ದಾರರನ್ನು ಆಯ್ಕೆ ಮಾಡುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.

Last date for submitting application: **As per e-procurement portal.**

Tender will be opened on: **As per e-procurement portal.**

**ವಿಭಾಗೀಯ ನಿಯಂತ್ರಣಾಧಿಕಾರಿ,**

ಕಕರಸಾ ನಿಗಮ: ಕಲಬುರಗಿ ವಿಭಾಗ-1 : ಕಲಬುರಗಿ.

ಪ್ರತಿಯನ್ನು : ಗೌ.ಪೂ.ವಾಗಿ:-

1. ಮಾನ್ಯ ಅಧ್ಯಕ್ಷರು ಆಪ್ತಕಾರ್ಯದರ್ಶಿಗಳು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಮಾನ್ಯ ಮುಖ್ಯ ಸಂಚಾರ ವ್ಯವಸ್ಥಾಪಕರು, ಕ.ರಾ.ರ.ಸಾ.ನಿಗಮ ಕೇಂದ್ರ ಕಛೇರಿ, ಬೆಂಗಳೂರು, ಬೆ.ಮ.ನ.ಸಾ, ಸಂಸ್ಥೆ, ಬೆಂಗಳೂರು, ಕಕರಸಾಸಂಸ್ಥೆ, ಕೇಂದ್ರ ಕಛೇರಿ, ಕಲಬುರಗಿ ಹಾಗೂ ವಾಕರಸಾ ಸಂಸ್ಥೆ :: ಕೇ.ಕ.ಹುಬ್ಬಳ್ಳಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
3. ಮುಖ್ಯ ಗಣಕ ವ್ಯವಸ್ಥಾಪಕರು ಕಕರಸಾ ನಿಗಮ, ಕೇಂದ್ರ ಕಛೇರಿ, ಕಲಬುರಗಿ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
4. ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕರಾರಸಾ. ನಿಗಮ, ಬೆಂಗಳೂರು (ನಗರ/ಕೇಂದ್ರ/ಗ್ರಾಮೀಣ): ಹಾಸನ, ದಾವಣಗೆರೆ, ಕೋಲಾರ, ತುಮಕೂರು, ಮಂಗಳೂರು, ಚಿಕ್ಕಮಂಗಳೂರು, ಚಾಮರಾಜನಗರ, ರವರ ಮಾಹಿತಿಗೆ ಹಾಗೂ ಹೆಚ್ಚಿನ ಪ್ರತಿಗಳನ್ನು ಪ್ರಮುಖ ನಿಲ್ದಾಣಗಳಲ್ಲಿನ ಸೂಚನಾ ಫಲಕಗಳ ಮೇಲೆ ಪ್ರಕಟಣೆ ಪಡಿಸಲು ಕೋರಲಾಗಿದೆ.
5. ವಿಭಾಗೀಯ ನಿಯಂತ್ರಣಾಧಿಕಾರಿಗಳು, ವಾಕರಸಾ ಸಂಸ್ಥೆ:ಹುಬ್ಬಳ್ಳಿ, ಗದಗ, ಬೆಳಗಾವಿ, ಬಾಗಲಕೋಟೆ, ಸಿರ್ಸಿ,(ಎನ್.ಕೆ) ಚಿಕ್ಕೋಡಿ, ಇವರ ಮಾಹಿತಿಗೆ ಹಾಗೂ ಹೆಚ್ಚಿನ ಪ್ರತಿಗಳನ್ನು ಪ್ರಮುಖ ನಿಲ್ದಾಣಗಳಲ್ಲಿನ ಸೂಚನಾ ಫಲಕಗಳ ಮೇಲೆ ಪ್ರಕಟಪಡಿಸಲು ಕೋರಲಾಗಿದೆ.
6. ವಿಭಾಗೀಯ ನಿಯಂತ್ರಣಾದಿಕಾರಿಗಳು, ಕಕರಸಾ ಸಂಸ್ಥೆ, ಕಲಬುರಗಿ, ಬೀದರ, ರಾಯಚೂರು, ಯಾದಗಿರ ಕೊಪ್ಪಳ, ವಿಜಾಪುರ, ಹೊಸಪೇಟೆ ರವರ ಮಾಹಿತಿಗೆ ಹಾಗೂ ಹೆಚ್ಚಿನ ಪ್ರತಿಗಳನ್ನು ಪ್ರಮುಖ ನಿಲ್ದಾಣಗಳಲ್ಲಿನ ಸೂಚನ ಫಲಕಗಳ ಮೇಲೆ ಪ್ರಕಟಪಡಿಸಲು ಕೋರಲಾಗಿದೆ.

ಪ್ರತಿಯನ್ನು:

1. ಸ.ಕಾನೂನು ಅಧಿಕಾರಿಗಳು/ಸ.ಲೆಕ್ಕಾಧಿಕಾರಿ/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ ಸ.ಭದ್ರತಾ ಮತ್ತು ಜಾಗೃತಾಧಿಕಾರಿಗಳು ಕಕರಸಾ ನಿಗಮ ಕಲಬುರಗಿ ವಿಭಾಗ-1 ಇವರ ಮಾಹಿತಿಗೆ ಹಾಗು ದಿನಾಂಕ: -06-2022 ರಂದು ಬೆಳಗ್ಗೆ -00 ಗಂಟೆಗೆ ಹಾಜರಾಗಲು ಕೋರಲಾಗಿದೆ.
2. ಘಟಕ ವ್ಯವಸ್ಥಾಪಕರು, ಕಕರಸಾ ನಿಗಮ: ಕಲಬುರಗಿ 1 & 4 ಚಿಂಚೋಳಿ, ಚಿತ್ತಾಪೂರ, ಕಾಳಗಿ, ಸೇಡಂ, ಇವರ ಮಾಹಿತಿಗೆ ಹಾಗೂ ಹೆಚ್ಚಿನ ಪ್ರತಿಗಳನ್ನು ತಮ್ಮ ಘಟಕದ ವ್ಯಾಪ್ತಿಯಲ್ಲಿ ಬರುವ ಪ್ರಮುಖ ನಿಲ್ದಾಣಗಳಲ್ಲಿನ ಸೂಚನಾ ಫಲಕಗಳ ಮೇಲೆ ಪ್ರಕಟಿಸಲು ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.
3. ನಿಲ್ದಾಣಾಧಿಕಾರಿಗಳು ಸಂಚಾರ ನಿಯಂತ್ರಕರು, ಚಿಂಚೋಳಿ, ಚಿತ್ತಾಪೂರ, ಕಾಳಗಿ, ಸೇಡಂ,ಕಮಲಾಪುರ,ಶಹಬಾದ,ಸುಲೆಪೆಟ್, ಸುಪರ್ ಮಾರ್ಕೇಟ ಇವರ ಮಾಹಿತಿಗೆ ಹಾಗೂ ಪ್ರತಿಗಳನ್ನು ನಿಲ್ದಾಣದಲ್ಲಿನ ಸೂಚನ ಫಲಕಗಳ ಮೇಲೆ ಪ್ರದರ್ಶಿಸಲು ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.

ವಿಭಾಗೀಯ ನಿಯಂತ್ರಣಾಧಿಕಾರಿ
ಕ.ಕ.ರ.ಸಾ ನಿಗಮ : ಕಲಬುರಗಿ ವಿಭಾಗ-1

ಗೆ,

**ವಿಭಾಗೀಯ ನಿಯಂತ್ರಣಾಧಿಕಾರಿರವರಿಗೆ,**

ಕ.ಕ.ರ.ಸಾ.ನಿಗಮ, ಕಲಬುರಗಿ ವಿಭಾಗ-1

ಕಲಬುರಗಿ

ಮಾನ್ಯರೆ,

**ವಿಷಯ :-** ಕಪ್ಪು ಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ಸ್ವಯಂ ದೃಢೀಕರಣ ಪತ್ರ.

★ ★ ★ ★ ★

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಾನು ಕೊಟೇಷನ್ ಪ್ರಕಟಣೆ ಸಂಖ್ಯೆ 1/2022 ಕ್ಕೆ ಸಂಬಂಧಿಸಿದಂತೆ, ಎಲ್ಲಾ ಷರತ್ತು/ನಿಬಂಧನೆಗಳನ್ನು ಓದಿ ಅರ್ಥೈಸಿಕೊಂಡು, ಅವುಗಳಿಗೆ ನಾನು ಬದ್ಧನಾಗಿ ಚಿಂಚೋಳಿ, ಚಿತ್ತಾಪೂರ,ಸೇಡಂ,ಶಹಾಬಾದ,ಸುಲೇಪೆಟ್,ಮಳಖೇಡ್,ಮುಧೋಳ್,ಕಮಲಪೂರ ಸುಮರ್ ಮಾರ್ಕೇಟ ಒಂಬತ್ತು ಬಸ್ ನಿಲ್ದಾಣಗಳ ಸ್ವಚ್ಛತಾ ಗುತ್ತಿಗೆಗೆ ಇ-ಪ್ರಕ್ಯೂರಮೆಂಟ್ ಮುಖಾಂತರ ಅರ್ಜಿಸಲ್ಲಿಸಿದ್ದು, ನಾನು ವಾ.ಕ.ರ.ಸಾ.ಸಂಸ್ಥೆ/ ಕ.ಕ.ರ.ಸಾ.ಸಂಸ್ಥೆ/ ಕ.ರಾ.ರ.ಸಾ.ನಿಗಮ/ ಬೆಂ.ಮ.ಸಾ.ಸಂಸ್ಥೆ ಮತ್ತು ಇತರೆಸರ್ಕಾರಿ ಇಲಾಖೆಗಳಲ್ಲಿ ಯಾವುದೇ ವಾಣಿಜ್ಯ ಮಳಿಗೆಗೆ, ಉಪಹಾರ ಗೃಹಕ್ಕೆ, ಸ್ವಚ್ಛತಾ ಗುತ್ತಿಗೆಗೆ ಹಾಗೂ ಜಾಹಿರಾತು ವಿಷಯಕ್ಕೆ ಸಂಬಂಧಿಸಿದಂತೆ ಕಪ್ಪು ಪಟ್ಟಿಗೆ ಸೇರಿಲ್ಲವೆಂದು ಈ ಮೂಲಕ ಸ್ವಯಂ ದೃಢೀಕರಿಸುತ್ತೇನೆ.ನಾನು ಒದಗಿಸಿರುವ ಮಾಹಿತಿಯು ಸತ್ಯವೆಂದು ದೃಢೀಕರಿಸುತ್ತಾ, ಈ ಬಗ್ಗೆ ಯಾವುದೇ ಮಾಹಿತಿ ತಪ್ಪು ಎಂದು ಯಾವುದೇ ಹಂತದಲ್ಲಿ ಕಂಡುಬಂದಲ್ಲಿ ನಾನು ಸಲ್ಲಿಸಿರುವ ಇ.ಎಂ.ಡಿ / ಭದ್ರತಾ ಠೇವಣಿಯ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ನನ್ನ ಆಯ್ಕೆ/ಕರಾರನ್ನು ರದ್ದುಗೊಳಿಸುವ ಅಧಿಕಾರ ಸಂಸ್ಥೆಯು ಹೊಂದಿದೆ ಎಂದು ತಿಳಿದು ಇ-ಕೊಟೇಶನ್ ಅರ್ಜಿ ಸಲ್ಲಿಸಿರುತ್ತೇನೆ. ಈ ಬಗ್ಗೆ ನಾನು ಯಾವುದೇ ತಪ್ಪು ಮಾಹಿತಿ ನೀಡಿರುವುದು ಕಂಡುಬಂದಲ್ಲಿ / ಅಸತ್ಯವೆಂದು ದೃಡಪಟ್ಟಲ್ಲಿ ಸಂಸ್ಥೆಯು ತೆಗೆದುಕೊಳ್ಳುವ ನಿರ್ಧಾರ/ಎಲ್ಲಾ ಕ್ರಮಗಳಿಗೆ ನಾನು ಬದ್ಧನಾಗಿರುತ್ತೇನೆಂದು ಈ ಮೂಲಕ ದೃಢೀಕರಿಸುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ದಿನಾಂಕ: (                    )

ದೂರವಾಣಿ ಸಂಖ್ಯೆ